International Journal of Kannada Research
www.kannadajournal.com

**ISSN: 2454–5813**
IJKR 2022; 8(3): 01-04
© 2022 IJKR
www.kannadajournal.com
Received: 03-05-2022
Accepted: 07-06-2022

**ಡಾ.ಶ್ರೀನಿವಾಸ ಟಿ**
ಸಹಾಯಕ ಪ್ರಾಧ್ಯಾಪಕರು,
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಡಾ.ಶ್ರೀನಿವಾಸ ಟಿ**
ಸಹಾಯಕ ಪ್ರಾಧ್ಯಾಪಕರು,
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು,
ಕರ್ನಾಟಕ, ಭಾರತ

# ಜನಪದ ಸಾಹಿತ್ಯದಲ್ಲಿ ಮಹಿಳೆಯ ಪಾತ್ರ

**ಡಾ.ಶ್ರೀನಿವಾಸ ಟಿ**

ಜನ, ಜನಪದ, ಜಾನಪದ ಸದಾ ಚಲನಶೀಲ ಗತಿಯುಳ್ಳವು. ಕಾಲಮಾನದ ಅಗತ್ಯಗಳಿಗೆ ತಕ್ಕಂತೆ ಅವು ಬಹು ವಿಧ ರೂಪಾವಳಿಗಳೊಂದಿಗೆ ಚಲಿಸುತ್ತಿರುತ್ತವೆಯೇ ಹೊರತು ಸಾಯುವುದಿಲ್ಲ. ಹಾಗೆಂದೇ ಸಿ. ಎಫ್. ಹಾಕೆಟ್ 'ಜಾನಪದ ಸಾಯಲು ಬಯಸದ ಜೀವಂತ ಪಳೆಯುಳಿಕೆ' ಎನ್ನುತ್ತಾನೆ. ಜನಪದ ಸಂಸ್ಕೃತಿ ರೂಪಿಸುವ ಬದುಕು ಅನೌಪಚಾರಿಕವಾದುದು. ಆದರ್ಶದ್ದು, ಮನುಷ್ಯನ ರಾಗರತಿಗಳ ಮುಕ್ತಾಭಿವ್ಯಕ್ತಿ. ಈ ಸಂವೇದನೆಯ ಮಾಧ್ಯಮಗಳು ಜನಪದರಲ್ಲಿ ನೂರಾರು. ಅದಕ್ಕಾಗಿಯೇ ಅಧ್ಯಯನದ ದೃಷ್ಟಿಯಿಂದ ಶಾಬ್ದಿಕ ಹಾಗು ಅಶಾಬ್ದಿಕವೆಂದು ವರ್ಗೀಕರಣ ಮಾಡಿಕೊಂಡರು, ಇವುಗಳಲ್ಲೂ ಹತ್ತಾರು ಒಳ ಪಾತಳಿಗಳನ್ನು ಕಾಣಲು ಸಾಧ್ಯ. ಶಾಬ್ದಿಕದಲ್ಲಿ ಸಾಹಿತ್ಯ ರೂಪಗಳನ್ನು ಅಶಾಬ್ದಿಕದಲ್ಲಿ ಕಲೆಯ ರೂಪಗಳನ್ನು ಗಮನಿಸ ಬಹುದು.

ಜನಪದ ಸಾಹಿತ್ಯ ಗ್ರಾಮೀಣ ಜನತೆಯ ಸಮಗ್ರ ಜೀವನವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ. ಮಕ್ಕಳ ಮನಸ್ಸನ್ನು ತಟ್ಟಿ, ಅರಳಿಸಿ, ಕುತೂಹಲ ಮೂಡಿಸಿ, ಮುದ ನೀಡುವ ಸಾಹಿತ್ಯವೆಂದರೆ ಅದುವೇ ಜನಪದ ಸಾಹಿತ್ಯ. ಗ್ರಾಮೀಣ ಜನರ ಪ್ರತಿನಿತ್ಯದ ಬದುಕು ಸಾಗುತ್ತಾ ನಡೆದಂತೆ, ಅವರ ಭಾವನೆಗಳಿಗೆ ಅಭಿವ್ಯಕ್ತ ರೂಪ ಕೊಡಲು ಅವರ ಅಂತರಂಗದ ಮಿಡಿತವನ್ನು ಹೊರಗೆಡವಲು ಅವರ ಕೆಲಸಗಳ ಜೊತೆಯಲ್ಲಿಯೇ ಹಾಡು ಮತ್ತು ಕಲೆಗಳು ಸಹಜೀವಿಗಳಾಗಿ ಅವರ ಬಾಳಿನ ಅವಿಭಾಜ್ಯ ಅಂಗವಾಗಿ ಬೆಳೆದು ಬಂದವು. ಜನಪದರು ತಮ್ಮ ದಿನನಿತ್ಯದ ಕೆಲಸಗಳಾದ ನಾಟಿ ಮಾಡುವುದು, ಕಳೆ ಕೀಳುವುದು, ಉಳುಮೆ ಮಾಡುವುದು, ಮನೆ ಕೆಲಸ ಮಾಡುವುದು, ಹೀಗೆ ಹತ್ತು ಹಲವು ಕೆಲಸಗಳನ್ನು ಮಾಡುವಾಗ ದೇಹ ದಣಿಯುತ್ತದೆ. ಅಂತಹ ದಣಿವನ್ನು ನಿವಾರಿಸಿ ಕೊಳ್ಳಲು, ಬಿಡುವಿನ ಸಮಯವನ್ನು ಕಳೆಯಲು, ಶುಭಕಾರ್ಯಗಳ ಅನುಭವವನ್ನು ಹಂಚಿ ಕೊಳ್ಳಲು. ಬದುಕನ್ನು ಸುಂದರಗೊಳಿಸಿ ಕೊಳ್ಳಲು, ಆಧುನಿಕವಾದ ಯಾವುದೇ ಮನರಂಜನೆ ಇಲ್ಲದಿದ್ದ ಕಾರಣ, ಗೀತೆ, ಕಥೆ, ಗಾದೆ, ಒಗಟು ಲಾವಣಿ ಮುಂತಾದವುಗಳನ್ನು ರಚಿಸಿದರು. ಇವು ಅವರ ಸಹಜ ಸೃಷ್ಠಿಯೆ ಹೊರತು ಉದ್ದೇಶಪೂರ್ವಕವಾದವುಗಳಲ್ಲ. ಜನಪದ ಸಾಹಿತ್ಯ ಸರಳವಾಗಿದ್ದು ವಾಸ್ತವ ಜೀವನದೊಂದಿಗೆ ಸಂಬಂಧವುಳ್ಳದ್ದಾಗಿದೆ. ಜನಪದ ಎಂಬ ಪದ ಅನಾದಿ ಕಾಲದಿಂದಲು ಬಳಕೆಯಲ್ಲಿದೆ. ಜನಪದ ಎನ್ನುವುದು ಸಮುದಾಯ, ಜನ ಸಮೂಹ, ಜನ ಸಮೂಹದ ಆಡಳಿತವೆಂದು ಗುರ್ತಿಸಿ ಕೊಳ್ಳುತ್ತದೆ. ಬಿ ಎಂ ಶ್ರೀ ಯವರು ಹೇಳುವಂತೆ 'ಜನವಾಣಿ ಬೇರು, ಕವಿ ವಾಣಿ ಹೂ' ಎನ್ನುವುದು ಜನಪದ ಸಾಹಿತ್ಯದ ಗಟ್ಟಿತನವನ್ನು ತೋರಿಸುತ್ತದೆ. ಜನಪದ ಗೀತೆಗಳಲ್ಲಿ ಅನಾವರಣಗೊಂಡಿರುವ ಜೀವನ ಮೌಲ್ಯಗಳಿಗೆ ಅದರದೇ ಆದ ಸ್ಥಾನವಿದೆ. ಹೆಣ್ಣಿನಿಂದಲೇ ಜನಪದ ಗೀತೆ, ಸಂಸ್ಕೃತಿ ಹುಟ್ಟಿದ್ದು ಸಾಹಿತ್ಯಕ್ಕೆ ಸ್ತ್ರೀಯರ ಕೊಡುಗೆ ಅನನ್ಯವಾದುದು ಕುಟುಂಬದ ಆಚಾರ ವಿಚಾರ, ಸುಖ ದುಖ:, ಗಂಡ ಹೆಂಡತಿಯ ಜಗಳ ಜನಪದ ಸಾಹಿತದ್ಯಲ್ಲಿ ಸೊಗಸಾಗಿ ಮೂಡಿ ಬಂದಿವೆ. ಜನಪದ ಸಾಹಿತ್ಯದಲ್ಲಿ ಸಾಮಾಜಿಕ ಜೀವನದ ಒಂದು ಮಗ್ಗುಲನ್ನೆ ಪರಿಚಯಿಸುವಂತಹ ತ್ರಿಪದಿಗಳಿವೆ. ಸ್ತ್ರೀಯರ ಮನೋಧರ್ಮ ಗುರ್ತಿಸುವಂತಹ ಹಾಡುಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿವೆ. ಜನಪದ ಸಾಹಿತ್ಯ ಕವಿರಾಜಮಾರ್ಗಕಾರ ಹೇಳಿದ ಹಾಗೆ....

> 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳು,
> ಪದನರಿದು ನುಡಿಯಲುಂ ನುಡಿದುದನರಿದಾರಯಲುಂ
> ಶಕ್ತರಾದ ನಾಡವರು.'

ಎಂಬ ಮಾರ್ಗಕಾರನ ಹೇಳಿಕೆಯಲ್ಲಿ ವಿದ್ಯೆ ಎನ್ನುವುದು ಗಗನ ಕುಸುಮವಾಗಿದ್ದ ಅಂದಿನ ಕಾಲದ ನಮ್ಮ ಜನ ಅವಿದ್ಯಾವಂತರಾದರೂ ಕಾವ್ಯಗಳನ್ನು ರಚಿಸ ಬಲ್ಲಷ್ಟು ಬುದ್ದಿವಂತರಾಗಿದ್ದರು ಎಂಬ ಅಂಶ ತಿಳಿದು ಬರುತ್ತದೆ. ಇಂತಹ ಅವಿದ್ಯಾವಂತ ಜನ ಸಾಮಾನ್ಯರಿಂದ ರಚಿತವಾದುದೆ ಜನಪದ ಸಾಹಿತ್ಯ. ಇವರು ತಮ್ಮ ಕೆಲಸದ ನಡುವೆ ಆಯಾಸ ಪರಿಹಾರಕ್ಕೆಂದು ಅನುಭವ ಸಹಿತವಾದ ಗೀತೆಗಳನ್ನು ರಚಿಸಿದರು. ಹೀಗೆ ರಚನೆಯಾದ ಸಾಹಿತ್ಯ ಜೀವನ ಮೌಲ್ಯವನ್ನು ಘಂಟಾಘೋಷವಾಗಿ ಸಾರಿ ಕ್ರಾಂತಿಯ ಕಿಡಿ ಹೊತ್ತಿಸಿದ ಈ ಜನಪದರು ಜನಪದ ಜೀವನವನ್ನು ಆಳವಾಗಿ ಅಭ್ಯಸಿಸಿದವರು. ಪ್ರತಿಭೆ ಎನ್ನುವುದು ಅವರ ಜನ್ಮಸಿದ್ಧ ಹಕ್ಕಾಗಿತ್ತು. ಗ್ರಾಮ್ಯ ಸಮಾಜದ ಕಷ್ಟ, ನೋವು, ನಲಿವುಗಳಿಗೆ ಸ್ಪಂದಿಸಿ ನೀತಿಯನ್ನು ಉಪದೇಶಿಸಿದರು, ಮೌಖಿಕತೆಯೇ ಇವರ ಶುದ್ಧ ಸಾತ್ವಿಕ ಶಕ್ತಿ, ಆದುದರಿಂದ ಜಾನಪದವನ್ನು ಬಾಯಿಂದ ಬಾಯಿಗೆ ಹರಿದಾಡಿದ ಕಂಠಸ್ಥ ಸಾಹಿತ್ಯ ಎಂದು ಕರೆಯುತ್ತಾರೆ. ಜಾನಪದ ಸಂಸ್ಕೃತಿಯ ಒಡಲಿನ ಸೂಕ್ಷ್ಮಗಳು ನಮ್ಮನ್ನು ಸದಾ ಎಚ್ಚರಿಸುತ್ತವೆ, ಜನಪರವಾದ ನೋವು ನಲಿವುಗಳು, ಸೋಲು ಗೆಲುವು, ಎತ್ತರ ಬಿತ್ತರ, ಕಷ್ಟ ಕಾರ್ಪಣ್ಯ, ಈ ಎಲ್ಲಾ ಭಾವನೆಗಳು, ಜನಪದರ ಅನುಭವದಲ್ಲಿ ಬೆಂದು ಪರಿಶುದ್ದವಾಗಿ ಸಮೂಹಕ್ಕೆ ಅನುಗುಣವಾಗಿ ಬೆಳೆದವು.

ಮೌಖಿಕ ಅಥವ ಕಂಠಸ್ಥ ಸಾಹಿತ್ಯದಲ್ಲಿ ತ್ರಿಪದಿಗೆ ಪ್ರಥಮ ಸ್ಥಾನ, ಜನಪದ ಸಂಸ್ಕೃತಿಯನ್ನು ಅವಲೋಕಿಸ ಬೇಕಾದರೆ, ಅದು ಆಡುಭಾಷೆಯ ನೀತಿಯನ್ನು ಪ್ರೇರೇಪಿಸಿರುವುದನ್ನು ನಾವು ಕಾಣ ಬಹುದಾಗಿದೆ. ಜನಪದರು ಅವಿದ್ಯಾವಂತರಾದ ಕಾರಣ ಅವರು ರಚಿಸುತ್ತಿದ್ದ ಸಾಹಿತ್ಯದ ಭಾಷೆ ಆಡು ಭಾಷೆಯೇ ಆಗಿರುತ್ತಿತ್ತು.

> 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
> ಬಾದಿಪ್ಪ ಕಲಿಗೆ ಕಲಿಯುಗ ವಿಪರೀತನ್
> ಮಾಧವನೀತನ್ ಪೆರನಲ್ಲ.

ಎಂಬ ಈ ಸಾಲುಗಳಲ್ಲಿ ಕಪ್ಪೆ ಅರಭಟ್ಟನೆಂಬ ಸಾಂಸ್ಕೃತಿಕ ನಾಯಕನೊಬ್ಬ ತನ್ನನ್ನು ನಂಬಿದ್ದ ಜನರಿಗೆ ಹೇಗೆ ನೆರವಾಗುತ್ತಿದ್ದ, ಮತ್ತು ಕೆಟ್ಟವರಿಗೆ ಹೇಗೆ ಸಿಂಹಸ್ವಪ್ನನಾಗಿದ್ದನು ಎಂದು ಒಬ್ಬ ಜನಪದ ಅನಕ್ಷರಸ್ಥ ತಾಯಿ ತನ್ನ ಮಗುವಿಗೆ ನೀತಿಯ ಅಂತ:ಸತ್ವವನ್ನು ಉಪದೇಶಿಸುತ್ತಾಳೆ. ದೈವತ್ವದಲ್ಲಿ ಬದುಕನ್ನು ಕಾಣುವ ಜನಪದ ಸ್ತ್ರೀಯರು ತ್ರಿಪದಿಯನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿಸಿ ಕೊಂಡರು. ನಮ್ಮಗಳ ಸಾಂಸ್ಕೃತಿಕ ಅನನ್ಯತೆಯನ್ನು ನಮ್ಮ ತಾಯಿ ತಂಗಿಯರು ಅಕ್ಕಂದಿರು ಜನಪದ ಹಾಡುಗಳ ಮೂಲಕ ಜೀವ ತುಂಬಿದರು ಹೀಗಾಗಿ ಜನಪದ ಮಹಿಳೆಯರದೇ ನಿಜವಾದ ಕಾವ್ಯ ಉಳಿದದ್ದು ಕಾವ್ಯದ ಪ್ರತಿರೂಪ.

ಆದಿಯಿಂದಲೂ ಸೃಷ್ಠಿಯ ಮೂಲ ಸ್ತ್ರೀ ಆಗಿದ್ದಾಳೆ, ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಗೆ ಅವಳದೇ ಆದ ಗೌರವ, ಸ್ಥಾನಮಾನಗಳಿವೆ. ಇಂತಹ ಹೆಣ್ಣು ವಿಶಿಷ್ಠ ಶಕ್ತಿಗಳ ಸಂಗಮ. ಒಂದು ಜೀವವನ್ನು ಸೃಷ್ಠಿ ಮಾಡುವ ಶಕ್ತಿ ಮಹಿಳೆಗೆ ಇದೆ ಎಂದಾದರೆ ಖಂಡಿತವಾಗಿ ಅವಳಲ್ಲಿ ಅಗಾಧವಾದ ಶಕ್ತಿ ಇದೆ ಎಂದರ್ಥ. ದೇಶದಲ್ಲಿ ಅನಾದಿ ಕಾಲದಿಂದಲೂ ಕೌಟುಂಬಿಕ ಪದ್ದತಿ, ಸಂಸ್ಕೃತಿ, ಸಂಸಾರಗಳು ಕುಟುಂಬ ನಿರ್ವಹಣೆ, ಆರೈಕೆ ಮಾಡುವ ಜವಾಬ್ದಾರಿ ಹೆಣ್ಣಿಗೆ ಬಂದಿರುವುದರಿಂದ ಮನೆಯ ಹಿರಿಯರು, ಚಿಕ್ಕ ವಯಸ್ಸಿನಿಂದಲೇ ಆಕೆಗೆ ಹಲವಾರು ನೀತಿ ನಿಯಮಗಳು ಕಟ್ಟು ಪಾಡುಗಳನ್ನು ಹಾಕಿ ಬೆಳೆಸಿರುತ್ತಾರೆ.

ಯಾವುದೇ ಒಂದು ದೇಶ ಶಕ್ತಿಯುತವಾಗಿರ ಬೇಕಾದರೆ, ಅದರ ಸಮಾಜ ಬಲಿಷ್ಠವಾಗಿರ ಬೇಕು. ಅಂತಹ ಬಲಿಷ್ಠ ಸಮಾಜ ಕಟ್ಟುವಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯವಾದುದು. ಒಬ್ಬ ಮಹಿಳೆ ತನ್ನ ಕುಟುಂಬದಲ್ಲಿ ತಾಯಿ, ಮಗಳು, ಸೊಸೆ ಇತ್ಯಾದಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾಳೆ. ಹಾಗೆಯೇ ಸಾಮಾಜಿಕ ವ್ಯವಹಾರಗಳನ್ನು ಮಾಡುವ ಮೂಲಕ ಆರ್ಥಿಕ ಭದ್ರತೆಯನ್ನು ಮಾಡಿಕೊಂಡು ಸಮಾಜದ ಅಭಿವೃದ್ದಿಯ ಶಿಲ್ಪಿಯಾಗಿ, ಮಾದರಿ ಹೆಣ್ಣು ಮಗಳಾಗಿ ಮುಂದುವರಿಯುತ್ತಿದ್ದಾಳೆ.

ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರು ಸರಿ ಸಮಾನರು. ಎಲ್ಲಿ ಮಹಿಳೆಯರನ್ನು ಪೂಜಿಸುತ್ತಾರೋ ಅಲ್ಲಿ ದೇವರು ನೆಲೆಸಿರುತ್ತಾನೆ ಎಂಬ ಭಾವನೆ ಅನಾದಿ ಕಾಲದಿಂದಲೂ ನಮ್ಮ ಪುರಾಣ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ. ಪ್ರತಿ ಮಗುವಿಗೆ ಮನೆಯೆ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು. ಶಿಕ್ಷಿತ ಹೆಣ್ಣು ಮಗಳು ಮನೆಗೆ ನಿಧಿಯಿದ್ದಂತೆ. ಈ ಕಾರಣದಿಂದಲೇ ಮಹಿಳೆಯು ಸಮಾಜ, ಸಮುದಾಯ ಹಾಗು ದೇಶ ಅಭಿವೃದ್ಧಿಯಾಗಲು ಕಾರಣಕರ್ತಳಾಗುತ್ತಾಳೆ.

ಪಿತೃ ಪ್ರಧಾನ ಸಮಾಜದಲ್ಲಿ ಹೆಣ್ಣು ತಾನು ಹುಟ್ಟಿ ಬೆಳೆದ ಮನೆ ತೊರೆದು, ಮದುವೆಯಾಗಿ ಅಪರಿಚಿತ ಪರಿಸರದ ಜನರ ಮಧ್ಯದಲ್ಲಿ ಬದುಕು ರೂಪಿಸಿ ಕೊಳ್ಳುತ್ತಾಳೆ, ತನ್ನದೇ ಆದ ಕುಟುಂಬ ಕಟ್ಟುತ್ತಾಳೆ, ಇವೆಲ್ಲದಕ್ಕೂ ಅವಳ ತವರೂರಿನ ಅನುಭವಗಳು ಮಾರ್ಗದರ್ಶನ ನೀಡುತ್ತವೆ. ಮುಂಜಾನೆ ಎದ್ದು ದೇವರನ್ನು ಸ್ಮರಿಸಿ ತಮ್ಮನ್ನ ತಾವು ಕೆಲಸಗಳಲ್ಲಿ ತೊಡಗಿಸಿ ಕೊಳ್ಳುವುದು ನಮ್ಮ ಜನಪದ ಗರತಿಯರ ಸಂಪ್ರದಾಯ. ಭಕ್ತಿ ಭಾವನೆಯಿಂದ ಏಳುತ್ತಲೇ ಅನ್ನ ನೀಡುವ ಭೂ ದೇವಿಯ ಸ್ಮರಣೆಯಿಂದ ಅವರ ಬದುಕು ಪ್ರಾರಂಭವಾಗುವುದು.

> 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ
> ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯ
> ಎದ್ದೊಂದು ಗಳಿಗೆ ನೆನೆದೇನು.'

ಎಂದು ತಮ್ಮ ಬದುಕಿಗೆ ಆಸರೆ ನೀಡಿದ ಭೂಮಿ ತಾಯಿಗೆ ನಮಿಸುವ ಮೂಲಕ, ಕೃತಜ್ಞತೆಯನ್ನು ಸಲ್ಲಿಸುವ ಗರತಿ, ಕಲ್ಲಮ್ಮ ತಾಯಿ ಜಲ್ಲ ಜಲ್ಲನೆ ಉದುರವ್ವ ಎಂದು ಬೀಸುವ ಕಲ್ಲಿಗೆ ನಮಿಸುವ ಮೂಲಕ ಕಲ್ಲಿಗೂ ತಾಯಿ ಸ್ಥಾನವನ್ನು ನೀಡುತ್ತಾಳೆ. ಅಷ್ಟೇ ಅಲ್ಲದೇ ಈ ಲೋಕದ ಜನತೆಗೆ ಬೆಳಕನ್ನು ನೀಡಿ ಧನ್ಯರನ್ನಾಗಿಸಿದ ಸೂರ್ಯನನ್ನು ನೆನೆಯುವುದನ್ನು ಮತ್ತೊಂದೆಡೆ ಕಾಣ ಬಹುದಾಗಿದೆ.

> ಮುಂಗೋಳಿ ಕೂಗ್ಯಾವು, ಮೂಡಣ ಕೆಂಪೇರ್ಯಾವು
> ರವಿ ನಾರಾಯಣ ರಥವೇರಿ। ಬರುವಾಗ
> ನಾವೆದ್ದು ಕೈಯ್ಯ ಮುಗಿದೇವು.

ಎಂಬ ಪದ್ದತಿ ಇಂದಿಗೂ ರೂಡಿಯಲ್ಲಿದ್ದು, ನಸುಕಿನಲ್ಲಿಯೇ ಎದ್ದು ಗೃಹಕೃತ್ಯಗಳನ್ನು ಮುಗಿಸಿ, ಹೊಲದಲ್ಲಿ ದುಡಿಯುತ್ತಿರುವ ತನ್ನ ಗಂಡನಿಗೆ ಬುತ್ತಿಯನ್ನು ತೆಗೆದು ಕೊಂಡು ಹೋಗಿ ಅವನೊಟ್ಟಿಗೆ ಸಂಜೆಯ ತನಕ ಗೆಯ್ಮೆ ಮಾಡಿ ಮನೆಗೆ ಬರುತ್ತಾಳೆ. ಆ ಮೂಲಕ ಸಂಸಾರ ಸರಾಗವಾಗಿ ಸಾಗ ಬೇಕಾದರೆ ತನ್ನ ದುಡಿಮೆಯು ಅವಶ್ಯವೆಂಬ ಮನೋಭಾವ ಅವಳಲ್ಲಿದೆ.

ತನ್ನ ಕನಸುಗಳನ್ನು ಮರೆತು ಮಗುವಿಗಾಗಿ ಮಿಡಿಯುವ, ಮಗುವಿನ ಸಂತೋಷಕ್ಕಾಗಿ ತನ್ನೆಲ್ಲಾ ನೋವುಗಳನ್ನು ಮರೆಯುವ ಅವಳ ಹೃದಯ ವೈಶಾಲ್ಯವನ್ನು ವರ್ಣಿಸಲು ಶಬ್ದಗಳೇ ಸಾಲದು. ಮಕ್ಕಳನ್ನು ಹೆತ್ತು, ಹೊತ್ತು, ಸಾಕಿ ಸಲಹುವ ಈಕೆ ತನ್ನ ಅನುಭವಗಳನ್ನು ಅನೇಕ ಗೀತೆಗಳನ್ನು ರಚಿಸುವ ಮೂಲಕ ಕಂದನ ಆಟ ಪಾಠಗಳು ಅದರ ಅಂಗಾಂಗಗಳು ಮತ್ತು ಮಗುವಿನ ಗುಣ

ವರ್ಣನೆಯ ಸಂದರ್ಭದಲ್ಲಿ ಬಳಸಿರುವ ರೂಪಕಗಳು ಅವುಗಳನ್ನು ಕಟ್ಟಿ ಕೊಡುವ ಚಿತ್ರಗಳು ಅಸಾಧಾರಣವಾದ ಚೆಲುವಿನಿಂದ ಕೂಡಿವೆ.

ತೊಟ್ಟೀಲ ಹೊತ್ಕೊಂಡು, ತವರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು, ತಂಗ್ಯಮ್ಮ
ತಿಟ್ಟತ್ತಿ ತಿರುಗಿ ನೋಡ್ಯಾಳು ...

ತನ್ನ ತವರಿನಿಂದ ಚೊಚ್ಚಲ ಬಾಣಂತನವನ್ನು ಮುಗಿಸಿ ಹೊರಟ ಮಗಳಿಗೆ ಕರಾವಿನ ತೊಂದರೆಯಾಗ ಬಾರದೆಂದು ಅಪ್ಪ ಎಮ್ಮೆಯೊಂದನ್ನು ಜೊತೆಯಲ್ಲೇ ಕಳುಹಿಸಿರುತ್ತಾನೆ, ಇದು ಜನಪದರಿಗೆ ತಮ್ಮ ಮಗಳ ಬಗ್ಗೆ ಇರುವ ಪ್ರೀತಿಯನ್ನು ತೋರಿಸುತ್ತದೆ. ಇಂತಹ ತವರಿನ ಬಗ್ಗೆ ಮಗಳಿಗು ತುಂಬು ಅಭಿಮಾನ ಹಾಗಾಗಿಯೇ ಅವಳು ಹಾಲುಂಡ ತವರೀಗೆ ಏನೆಂದು ಹರಸಾಲೆ, ಹೊಳೆ ದಂಡೇಲಿರುವ ಕರಕೀಯ ಕುಡಿ ಹಂಗೆ ಹಬ್ಬಾಲಿ ಅವರ ರಸಬಳ್ಳಿ ಎಂದು ಮನದುಂಬಿ ಹಾರೈಸುತ್ತಾಳೆ. ತಂದೆ ತಾಯಿಯರನ್ನು ಸರಿಯಾಗಿ ನೋಡಿಕೊಳ್ಳದ ಅಣ್ಣ ತಮ್ಮಂದಿರಿಗೆ ಪ್ರೀತಿಯಿಂದ ಬುದ್ದಿಯನ್ನು ಹೇಳುತ್ತಾಳೆ, 'ಮಡದೀ ಸತ್ತರೆ ತರಬಹುದು, ಅಣ್ಣಯ್ಯ, ಅವ್ವ ಸತ್ತಾರೆ ತರಲು ಬಾರದು' ಎನ್ನುವಲ್ಲಿ ತಾಯಿಯ ಬಗೆಗೆ ಅವಳಿಗಿರುವ ಕಾಳಜಿಯನ್ನು ಗಮನಿಸ ಬಹುದಾಗಿದೆ. ಅಂತೆಯೇ ಇಡೀ ವಿಶ್ವಕ್ಕೆ ತಾಯಿ ಒಬ್ಬ ವ್ಯಕ್ತಿ ಮಾತ್ರವಾದರೆ, ಮಗುವಿಗೆ ಮಾತ್ರ ತಾಯಿಯೇ ವಿಶ್ವವಾಗುತ್ತಾಳೆ

ಯಾರು ಇದ್ದಾರು ನನ್ನ ತಾಯವ್ನೋಲೋರು,
ಸಾವಿರ ಕೊಳ್ಳಿ, ಒಲೆಯಾಗ ಇದ್ದರೂ ಜ್ಯೋತಿ
ನಿನ್ನಾರೂ ಹೋಲ್ಯಾರು.

ಎನ್ನುವಲ್ಲಿ ಮಗಳಿಗೆ ತಾಯಿಯ ಬಗೆಗಿನ ಆದರ, ಪ್ರೀತಿ, ವಾತ್ಸಲ್ಯದ ಅರಿವಾಗದೇ ಇರದು. ಹಾಗೆಯೇ ತಂದೆಯ ಬಗೆಗೂ ಅವಳಿಗೆ ಅಮಿತವಾದ ಪ್ರೀತಿಯಿದ್ದು, 'ತಂದೆಯ ನೆನೆದಾರೆ ತಂಗೂಳೂ ಬಿಸಿಯಾಯ್ತು' ಎನ್ನುತ್ತಾಳೆ.
'ಹೆಣ್ಣೀನ ಜನುಮಾಕೆ ಅಣ್ಣ ತಮ್ಮರು ಬೇಕು, ಬೆನ್ನು ಕಟ್ಟುವರು ಸಭೆಯೊಳಗೆ' ಎಂದು ಭಾವಿಸುವ ಆಕೆ, ಆಷಾಡ ಮಾಸ ಬಂದರೂ ಅಣ್ಣ ಯಾಕೆ ಇನ್ನು ತವರಿಗೆ ಕರೆಯಲು ಬಂದಿಲ್ಲ ಎನ್ನುವ ಆತಂಕ ಅವಳಿಗೆ, ಇಲ್ಲಿ ಆತಂಕಕ್ಕಿಂತ ಹಬ್ಬದ ನೆಪದಲ್ಲಿಯಾದರೂ ತವರು ಮನೆಗೆ ಹೋಗ ಬಹುದಲ್ಲ ಎಂಬ ಭಾವ ಅವಳದು. ಇಂತಹ ಅಣ್ಣನೊಬ್ಬ ತಂಗಿಯನ್ನು ಮದುವೆಗೆ ಕರೆಯುವುದೇ ಒಂದು ಚೆಂದ
ಕುದುರೇಯ ತಂದಿವ್ನಿ ಜೀನಾವ ಬಿಗಿದಿವ್ನೀ
ಬರಬೇಕು ತಂಗಿ ಮದುವೇಗೆ.
ಮುಂದುವರೆದು ಗೆಳೆಯರೊಟ್ಟಿಗೆ ಆಟವಾಡಿ ದಣಿದು ಬಂದ ಮಗುವನ್ನು ಆಕೆ ಸತ್ಕರಿಸುವುದೇ ಒಂದು ಚೆಂದ. 'ಆಡಿ ಬಾ ನನ್ನ ನನ್ನಯ್ಯ, ಅಂಗಾಲ ತೊಳೆದೇನು, ತೆಂಗೀನಕಾಯ ತಿಳಿನೀರ್ನ ತಕ್ಕೊಂಡು ನಿನ್ನ ಬಂಗಾರ್ದ ಮೋರೆ ತೊಳೆದೇನು'. ಎನ್ನುವಲ್ಲಿ ಮಗುವಿನ ಬಗೆಗಿನ ನಿಷಲ್ಮಷವಾದ ಆಕೆಯ ಪ್ರೀತಿ, ವಾತ್ಸಲ್ಯವನ್ನು ನೋಡ ಬಹುದಾಗಿದೆ.

ನನ್ನಯ್ಯನಂತೋರು ಹನ್ನೆರಡು ಮಕ್ಕಳು
ಹೊನ್ನೇಯ ಮರದ ನೆರಳಲ್ಲಿ। ಆಡ್ವಾಗ
ಸನ್ಯಾಸಿ ಜಪವ ಮರೆತಾನು.॥

ಎನ್ನುವುದಲ್ಲದೆ ಹಳ್ಳಕ್ಕೆ ಬರಬೇಡ ಮಗುವೇ ಬೆಳ್ಳಕ್ಕಿ ಹಿಂಡು ಬೆದರ್‍ಯಾವು, ಎನ್ನುವ ಆಕೆಗೆ ತನ್ನ ಮಗು ಭೂಲೋಕದಲ್ಲಿಯೇ ಅತ್ಯಂತ ಮುದ್ದಾಗಿದ್ದು ಅದರ ಅಂದ ಚೆಂದಕೆ ಇಡೀ ಪ್ರಕೃತಿಯೇ ಬೆರಗಾಗುತ್ತದೆ ಎನ್ನುವ ಭಾವ ಅವಳಲ್ಲಿದೆ.

ಆಚಾರಕೆ ಅರಸಾಗು, ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು। ನನ ಕಂದ
ಜ್ಯೋತಿಯೇ ಆಗು ಜಗಕ್ಕೆಲ್ಲಾ॥

ಎನ್ನುವಲ್ಲಿ ತನ್ನ ಮಗನು ಒಳ್ಳೆಯ ನಡೆ ನುಡಿ, ಆಚಾರ ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿ ಕೊಂಡು ಸಮಾಜದಲ್ಲಿ ಉತ್ತಮ ಗೌರವ ಸ್ಥಾನಮಾನಗಳನ್ನು ಗಳಿಸಿ ಕೊಂಡು ಬಾಳಲಿ ಎಂಬ ಆಶಯ ಅವಳಲ್ಲಿದೆ.
'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬುದು ವಚನಕಾರರ ನಂಬುಗೆ, ಕಾಯಕವೇ ಕೈಲಾಸ ಎಂಬುದು ಜನಪದರ ಜೀವನ ಸೂತ್ರವಾಗಿದೆ. ಕಾಯಕದಲ್ಲಿ ಅವರು ಮೇಲು ಕೀಳುಗಳನ್ನು ಪರಿಗಣಿಸಿದವರಲ್ಲ, ಊಹಿಸಿದವರೂ ಅಲ್ಲ, ರೈತ ತನ್ನ ಬಿತ್ತನೆ ಕಾಯಕದಲ್ಲಿ ತೊಡಗಿದರೆ, ಇತರೆ ಜನಾಂಗದವರು ತಂತಮ್ಮ ಕುಲಕ್ಕೆ ಒದಗಿ ಬಂದ ಕಸುಬುಗಳನ್ನು ಮಾಡುತ್ತಾ ಸಮಾಜದಲ್ಲಿ ಮಾದರಿಯಾಗಿ ನಿಲ್ಲುವುದೇ ಅಲ್ಲದೇ ಬಸವಣ್ಣನವರ 'ಕಾಯಕವೇ ಕೈಲಾಸ'ವೆಂಬ ತತ್ವಕ್ಕೆ ಚ್ಯುತಿ ಬಾರದಂತೆ ಜನಪದರು ತಮ್ಮ ದುಡಿಮೆಯ ಮೂಲಕ ಇತರರಿಗೆ ಹೊರೆಯಾಗದೆ ಕಾಯಕದ ಮೂಲಕ ಆಹಾರವನ್ನು ಸೇವಿಸುತ್ತಿದ್ದರು. ಇಂತಹ ಗಂಡ ಗರತಿಯೊಬ್ಬಳ ಅರಿವಿಗೇ ಬಾರದೆ ಮತ್ತೊಬ್ಬಳೊಟ್ಟಿಗೆ ಗುಟ್ಟಾಗಿ ಸಂಬಂಧವನ್ನಿಟ್ಟು ಕೊಂಡುದು ಗೊತ್ತಾದಾಗ, ಅವನಿಗೆ ಪ್ರೀತಿಯಿಂದಲೇ ಬುದ್ದಿ ಹೇಳುತ್ತಾಳೆ.

ಅಂಗಿ ಮೇಲಂಗಿ ಚೆಂದೇನೋ ನನರಾಯ
ರಂಬಿ ಮೇಲ ಪ್ರತಿರಂಬಿ..

ಎಂದು ಪ್ರಶ್ನಿಸುವ ಮೂಲಕ ಗಂಡನ ಮನವೊಲಿಸಿ ಅವನನ್ನು ಸರಿ ದಾರಿಗೆ ತರುತ್ತಾಳೆ.
'ಮಾಯದಂತ ಮಳೆ ಬಂತಣ್ಣ, ಮಗದಾದ ಕೆರೆಗೆ', 'ನಿಂಬೀಯಾ ಬನದ ಮೇಗಳ ಚಂದ್ರಾಮ ಚೆಂಡಾಡಿದ', 'ನವ್ವಾಲೆ ಬಂತಮ್ಮ ನವ್ವಾಲ' ಎಂಬಿತ್ಯಾದಿ ಗೀತೆಗಳಲ್ಲಿ ಜನಪದರಿಗೆ ಪ್ರಕೃತಿಯ ಮೇಲಿರುವ ಪ್ರೀತಿ ವ್ಯಕ್ತವಾಗಿರುವುದನ್ನು ಕಾಣ ಬಹುದಾಗಿದೆ. ಹಾಗೆಯೇ ದೇವರ ಬಗೆಗು ಅವರಿಗೆ ಸಹಜವಾದ ಪ್ರೀತಿ ಮತ್ತು ಭಕ್ತಿ ಇದೆ.

ಶಿವನು ಭಿಕ್ಷಕೆ ಬಂದ ನೀಡು ಬಾರೆ ತಂಗಿ...
ತಿಂಗಾಳು ಮುಳುಗಿದವೋ ರಂಗೋಲಿ ಬೆಳಗಿದವೋ...
ಚೆಲ್ಲಿದರೂ ಮಲ್ಲಿಗೆಯ ಬಾನ ಸೂರೇರಿ ಮ್ಯಾಲೆ...

ಜನಪದರು ತಮ್ಮ ಅನೇಕ ಗೀತೆಗಳ ಮೂಲಕ ಮಾನವ ಸಮಾಜವನ್ನು ಪ್ರಗತಿಯತ್ತ ಸಾಗಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇಂದು ಸಮಾಜ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದರೂ ಮಾನವನ ಮನಸ್ಸಿನ ಆಲೋಚನೆಗಳಲ್ಲಿ, ಮಾನವ ಸಂಬಂಧಗಳಲ್ಲಿ, ಮನುಷ್ಯತ್ವದ ಉಳಿವಿನಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸ ಬೇಕಾದ ಅನಿವಾರ್ಯತೆ ಹೆಚ್ಚಿದೆ. ಏಕೆಂದರೆ, ದಿನದಿಂದ ದಿನಕ್ಕೆ ಜೀವಪರ ಮೌಲ್ಯಗಳು ಕುಸಿಯುತ್ತಿದೆ. ಇದಕ್ಕೆ ಜನಪದರ ಅನೇಕ ಗೀತೆಗಳು ದಾರಿದೀಪಗಳಾಗಿವೆ. ಮನುಷ್ಯನ ಮನಸ್ಸು ಒಳ್ಳೆಯ ಚಿಂತನೆ, ಆಲೋಚನೆಗಳಿಂದ ಕೂಡಿದಾಗ ಮಾತ್ರ ಸಮಾಜದ ಪ್ರಗತಿ

ಸಾಧ್ಯವೆಂಬುದನ್ನು ಜನಪದರು ಹಲವಾರು ಗೀತೆಗಳಲ್ಲಿ ಅನಾವರಣಗೊಳಿಸಿದ್ದಾರೆ.

**ಆಕರ ಗ್ರಂಥಗಳು**

1. ಡಾ. ದೇ.ಜವರೇಗೌಡ. ಜಾನಪದ ಅಧ್ಯಯನ
2. ಡಾ. ಗದ್ಗೀಮಠ. ಕನ್ನಡ ಜನಪದ ಗೀತೆಗಳು
3. ಡಾ. ನಂ.ತಪಸ್ವಿಕುಮಾರ್.{ಸಂ} ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ
4. ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಗಾಯಿತ್ರಿ ನಾವಡ
5. ಜಾನಪದ ಸೌಂದರ್ಯ. ದೇ.ಜ.ಗೌ